International Journal of Kannada Research
www.kannadajournal.com

ISSN: 2454–5813
IJKR 2023; 9(1): 117-120
© 2023 IJKR
www.kannadajournal.com
Received: 16-11-2022
Accepted: 19-12-2022

**ಡಾ.ಜೆ.ಕರಿಯಪ್ಪ ಮಾಳಿಗೆ**
ಕನ್ನಡ ಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು.
ಚಿತ್ರದುರ್ಗ, ಕರ್ನಾಟಕ, ಭಾರತ

**Corresponding Author:**
**ಡಾ.ಜೆ.ಕರಿಯಪ್ಪ ಮಾಳಿಗೆ**
ಕನ್ನಡ ಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು.
ಚಿತ್ರದುರ್ಗ, ಕರ್ನಾಟಕ, ಭಾರತ

# ಬಯಲು ಸೀಮೆಯ ತತ್ವಪದಗಳು

**ಡಾ.ಜೆ.ಕರಿಯಪ್ಪ ಮಾಳಿಗೆ**

**ಪೀಠಿಕೆ**

**ಪರ್ಯಾಯ ಚಿಂತನೆಯ ಫಲ**

ಎಲ್ಲರ ಬದುಕಿನ ಕ್ರಮಗಳನ್ನು ಸಮಾನವಾಗಿ ಕಾಣುವುವದು ಪ್ರಜಾಸತ್ತಾತ್ಮಕ ಆಶಯಗಳಿಗೆ ಕೊಡುವ ಗೌರವ. ಇಂಥ ಪ್ರಜಾಸತ್ತಾತ್ಮಕ ಆಶಯವನ್ನ ನಾಡಿನ ಉದ್ದಗಲಕ್ಕೂ ಹರಡಿಕೊಂಡಿರುವ ನಿರ್ಲಕ್ಷಿತ ಸಮುದಾಯಗಳ ತತ್ವಪದ ಪರಂಪರೆಯೊಂದು ನಮ್ಮ ನಡುವೆ ಇದೆ. ಸಾಮರಸ್ಯ ಸೌಹಾರ್ದತೆ ಮತ್ತು ಸಮಾನತೆಯ ಬದುಕೊಂದನ್ನು ಜಾತಿ ವರ್ಣ ಲಿಂಗಭೇದಗಳನ್ನು ನಿರಾಕರಿಸಿ ಒಂದಾಗಿ ಬಾಳುವ ಬದುಕೊಂದನ್ನು ಭಾರತೀಯ ಶ್ರಮಣಧಾರೆಗಳು ಇತಿಹಾಸದುದ್ದಕ್ಕೂ ನಿರೂಪಿಸುತ್ತಾ ಬಂದಿವೆ. ವೈವಿಧ್ಯತೆ ನಮ್ಮ ನಾಡಿನ ಸಂಸ್ಕೃತಿ. ಅಂಥಹ ಬಹುತ್ವದ ಗುಣಹೊಂದಿರುವ ತತ್ವಪದಗಳನ್ನು'ನಾಡಿನ ಸಂಸ್ಕೃತಿಯ ಸ್ವರೂಪವನ್ನು ಅರಿಯಲು ವಿವಿಧ ಜಾತಿ ಮತ ವರ್ಗಗಳ ಜನ ರಚಿಸಿರುವ ತತ್ವಪದಗಳು ಮುಖ್ಯವಾಗುತ್ತವೆ' ಎಂದು ಓ.ಎಲ್.ನಾಗಭೂಷಣಸ್ವಾಮಿ ಅಭಿಪ್ರಾಯ ಪಡುತ್ತಾರೆ. ಜೀವನದ ಎಲ್ಲ ಸ್ತರಗಳಿಂದಲೂ ತತ್ವಪದಕಾರರು ಹುಟ್ಟಿಕೊಂಡಿದ್ದಾರೆ. ಜನರನ್ನು ಕೂಡಿಸಿಕೊಂಡು ಏಕದಾರಿ ಹಿಡಿದು ಹಾಡುತ್ತಿರುತ್ತಾರೆ.'ಎಲ್ಲಾ ಭಾಗಿಗಳಿಗೆ ತಮ್ಮ ಬದುಕಿನ ವಿವರಗಳ ಮೂಲಕ ಬೇರೊಂದು ಬೆಳಕನ್ನು ಕಾಣುವ, ಬೇರೊಂದು ಬೆಳಕಿನ ಮೂಲಕ ತಮ್ಮ ದೈನಿಕ ವಿವರಗಳನ್ನು ನೋಡುವ, ಇಹಪರದ ದ್ವಂದ್ವಗಳನ್ನು ದಾಟಿದ ಅವಕಾಶವನ್ನು ಒದಗಿಸುತ್ತಾರೆ. ಇಲ್ಲಿ ದುಡಿಮೆಯ ನಂತರದ ಪುರುಸೊತ್ತನ್ನು ರಂಜಕಗೊಳಿಸುವ ಮನರಂಜನೆ, ದಣಿವನ್ನು ಹಗುರಾಗಿಸುವ ಹಾಸ್ಯ ಎಲ್ಲವೂ ಮೇಳೈಸಿವೆ. ತತ್ವಪದ ಸಂಸ್ಕೃತಿ ಹಲವು ಸಾಮಾಜಿಕ ನಿಯೋಗಗಳನ್ನು ನೆರವೇರಿಸುವ ಬಗೆಯದು' ಎಂದು ಎಚ್.ಎಸ್.ಶಿವಪ್ರಕಾಶ್ ಅಭಿಪ್ರಾಯಪಡುತ್ತಾರೆ.

ದುಡಿಯುವ ವರ್ಗ ತಮ್ಮ ನಿತ್ಯದ ಬದುಕಿನ ಮತ್ತು ದುಡಿಮೆಯ ಅನುಭವಗಳನ್ನು ಸಾಮಾನ್ಯವಾಗಿ ಹೇಳುವುದಕ್ಕಿಂತ ಒಂದಷ್ಟು ಭಿನ್ನವಾದ ಆಲೋಚನಾ ಕ್ರಮದಲ್ಲಿ ಅಭಿವ್ಯಕ್ತಪಡಿಸಿದವುಗಳು ಗಾದೆ, ಒಗಟು, ಹಾಡು ಮತ್ತು ಲಾವಣಿಗಳು, ಕತೆಗಳು ಹೀಗೆ ವಿವಿಧ ರೂಪದಲ್ಲಿ ಪ್ರಕಟಗೊಂಡಿವೆ. ಅವುಗಳಲ್ಲಿ ಸಹಜ ಬದುಕಿನ ಪ್ರೀತಿ ಪ್ರೇಮ, ನೋವು ನಲಿವು, ಸಂಭ್ರಮ ಸಂಕಟಗಳು ವ್ಯಕ್ತವಾಗಿವೆ. ಇದರ ಜೊತೆಯಲ್ಲೆ ಭಕ್ತಿ ಧರ್ಮ ದೇವರು ಸಂಸಾರ ಸದಾಚಾರ ಸನ್ಮಾರ್ಗ ಸಮಾನತೆ ಗುರು ದೇಹ ಆತ್ಮ ಅರಿವು ನೈತಿಕತೆ ಜಾತ್ಯತೀತತೆ ಬಾವೈಕ್ಯತೆ ಮೊದಲಾದ ಬದುಕಿನ ಮೂಲಗಳನ್ನು ಕುರಿತಂತೆ ತಾತ್ವಿಕವಾಗಿಯೂ ಚಿಂತಿಸಿದ್ದಾರೆ. ಬದುಕನ್ನು ಹೊಳಹೊಕ್ಕು ನೋಡಿದ ಇಂಥ ಚಿಂತನೆಯ ನುಡಿಗಳು ದೈನಂದಿನ ವ್ಯವಹಾರಕ್ಕಿಂತ ಬೇರೆಯದೆ ಭಾವ ಮೂಡಿಸುತ್ತಿದ್ದವು. ಬಡತನ ಬರಗಾಲ ಕಷ್ಟಕಾರ್ಪಣ್ಯಗಳಲ್ಲಿ ಬಳಲುತ್ತಿದ್ದ ಜನಸಾಮಾನ್ಯರಿಗೆ ಒಂದಷ್ಟು ಸಾಂತ್ವನ ಹೇಳಿ ಬದುಕನ್ನು ಎದುರಿಸುವ ಮನೋಸ್ಥೈರ್ಯ ನೀಡಿದವು. ಧರ್ಮ ದೇವರುಗಳಿಂದ ಅನವರತ ಕಾಲದಿಂದಲೂ ನಿರ್ಲಕ್ಷಿಸಲ್ಪಟ್ಟ ತಳಸಮುದಾಯಗಳು ಮೇಲು ಕೀಳಿನ ತಾರತಮ್ಯವಿಲ್ಲದೆ ಎಲ್ಲ ವರ್ಗಗಳ ಸಂಸ್ಕೃತಿ ಸಂಪ್ರದಾಯಗಳಿಗೆ ಸ್ಪಂದಿಸಿ ಇಹದಲ್ಲಿಯೆ ಪಾರಮಾರ್ಥದ ಸಿದ್ಧಿಗಾಗಿ ಅನುಭಾವದ ಮಾರ್ಗ ಹಿಡಿದರು. ಇದಕ್ಕಾಗಿ ಗುರುವಿಗಾಗಿ ಹಂಬಲಿಸಿದರು. ಹರ ಮುನಿದರೆ ಗುರು ಕಾಯ್ವನು ಶಾಶ್ವತ ಎನ್ನುವ ನಂಬಿಕೆಯಿಂದ ಗುರು ಮಾರ್ಗ ಅನುಸರಿಸಿ ಅಂತರಂಗದ ಅರಿವಿನ ಮೂಲಕ ಪ್ರಾಸಂಗಿಕವಾಗಿ ಹುಟ್ಟಿದ ಅನುಭವದ ಮಾತುಗಳು ಅನುಭಾವದ ಪದಗಳಾಗಿ ಸರಳತೆ ಮತ್ತು ಗೇಯತೆಯಿಂದ ಭಜನಾಮೇಳಗಳಲ್ಲಿ ಹಾಡತೊಡಗಿದ್ದರಿಂದ ಭಜನೆ ಪದಗಳಾದವು. ಮೌಖಿಕ ಪರಂಪರೆಯಲ್ಲಿಯೆ ಏಕತಾರಿಯೊಂದಿಗೆ ಸಾಗಿಬಂದ ಭಜನೆ ಪದಗಳು ಕ್ರಮೇಣ ಶಿಷ್ಟರೂಪವನ್ನು ಪಡೆದವು. ಹೀಗೆ ಹೊಸ

ಪರಂಪರೆಯೊಂದನ್ನು ಸೃಷ್ಟಿಸಿದ ಈ ಹಾಡುಗಳನ್ನೆ ಅನುಭಾವದ ಹಾಡುಗಳೆಂದೂ, ಕೈವಲ್ಯದ ಹಾಡುಗಳೆಂದೂ, ತತ್ವಪದಗಳೆಂದೂ ಕರೆಯಲಾಗಿದೆ.

ಏಕನಾಥ ಬಾರಿಸೆ ತಂಗಿ । ಮುಂದೆ
ಲೋಕದಾಟವೆಲ್ಲ ಸಾಕುಮಾಡಿ ನೂಕುವಂತ ॥ಪ॥
ವಡಲೆಂಬುವದು ಸೋರೆಬುರುಡೆ ।
ನಡುನಾಡಿ ಎಂಬೂದೆ ವಳ್ಳೆ ದೃಢವಾದ ಗಣೇಯು ॥
ಈಡಾ ಪಿಂಗಳೆ ಎಂಬೋ ತಂತಿಯ ತೀಡುತ ।
ಕಡು ಸೋಹಂ ಎಂಬುವ ಬಿರುಡೆಯ ತಿರುವುತ॥ಏಕನಾಥ ॥1॥
ಧಾತ್ರಿಲಿ ಚಿತ್ರದುರ್ಗದ ಕರೀಂಪೀರಾ ।
ನಿತ್ಯವು ಮಾಡುವ ಆತ್ಮನ ಭಜನೆಗೆ ॥
ಶೃತಿ ಗುರುಬೋಧೆಗೆ ಸಮವಾಗಿ ಬಾರಿಸಿ ।
ಅತಿಶಯ ಮುಕ್ತೀಯ ಪಡೆಯಬೇಕು ಎಂದು॥ಏಕನಾಥ॥2॥

ಬಯಲು ಸೀಮೆಯಲ್ಲಿ ಕರೀಂಪೀರಾ ಎನ್ನುವ ಅಂಕಿತ ನೋಡಿ ಆತನ ತತ್ವಗಳನ್ನು ಹುಡುಕಲು ಆರಂಭಿಸಿದೆ. ಹತ್ತಾರು ಭಜನೆ ತಂಡದವರನ್ನು ಈ ಕಾರಣಕ್ಕಾಗಿಯೆ ಭೇಟಿಯಾದೆ. ಕರೀಂಪೀರ್ ಗೊತ್ತು, ಆದರೆ ಅವರು ತತ್ವಗಳನ್ನು ಬರೆದಿರೋದಾಗಲಿ, ಅವರು ಬರೆದ ತತ್ವಗಳನ್ನು ಹಾಡೋದಾಗಲಿ ಇಲ್ಲ ಎನ್ನುವ ಮಾತು ಕೇಳಿಬಂತು. ಕೊನೆಗೆ ಕರೀಂಪೀರರ ಬದುಕಿನ ಬಗ್ಗೆ ಮಾಹಿತಿ ಸಂಗ್ರಹಿಸಿದ ನಂತರ ತತ್ವಗಳನ್ನು ಹುಡುಕಲು ಆರಂಭಿಸಿದಾಗ ಕರೀಂಪೀರರು ಶಿರಾ ತಾಲೂಕಿನ ಬೇವಿನಹಳ್ಳಿ ಗ್ರಾಮದವರು. ತಂದೆ ಅನುಭಾವಿ ಗರೀಬ್ ಸಾಬ್. ಹಿರಿಯೂರು ತಾಲೂಕಿನ ಕಳವೀಭಾಗಿಯಲ್ಲಿ ಇವರ ಸಮಾಧಿ ಇದೆ. ಪರಶುರಾಮಪುರದ ರಾಜಯೋಗಿ ತಿಪ್ಪೇಸ್ವಾಮಿಯ ಶಿಷ್ಯರಾಗಿದ್ದ ಕಳವೀಭಾಗಿ ರಂಗಾವಧೂತರು ಮತ್ತು ಗರೀಬ್ ಸಾಬರು ಸಮಕಾಲೀನರು. ಈ ಮೂರು ಜನರ ಸಮಾಧಿ ಕಳವೀಭಾಗಿಯಲ್ಲಿ ಒಂದೇ ಆವರಣದಲ್ಲಿವೆ. ಯೋಗ ಧ್ಯಾನ, ಸತ್ಸಂಗ, ಮೊದಲಾದ ಆಧ್ಯಾತ್ಮದ ವಿಚಾರಗಳನ್ನು ಈ ಮೂರು ಜನ ಚರ್ಚಿಸುತ್ತಿದ್ದರೆಂದೂ ಕಳವೀಭಾಗಿ ಸಂಪ್ರದಾಯದವರು ಹೇಳುತ್ತಾರೆ. ಈ ಸಂಪ್ರದಾಯದ ಅನೇಕ ಶಿಷ್ಯ ಮಕ್ಕಳು ಸತ್ಸಂಗದ ಭಜನೆ ಸಂಘಗಳನ್ನು ಕಟ್ಟಿಕೊಂಡು ಈ ಪರಂಪರೆಯನ್ನು ಮುಂದುವರೆಸಿದ್ದಾರೆ. ಕರೀಪೀರರು ತಂದೆಯಿಂದ ಆಧ್ಯಾತ್ಮದ ವಿಚಾರಗಳ ಜೊತೆ ಗಿಡಮೂಲಿಕೆಗಳ ಔಷಧದ ಬಗ್ಗೆಯೂ ಕಲಿತಿದ್ದಾರೆ. ತಂದೆಯ ಮರಣದ ನಂತರ ಕರೀಂಪೀರರು ಬೇವಿನಹಳ್ಳಿಯಲ್ಲಿ ಗಿಡ ಮೂಲಿಕೆ ಔಷಧನೀಡುವ ಪಂಡಿತರೆಂದು ಹೆಸರು ಪಡೆದಿದ್ದಾರೆ. ಸಂಸಾರವಂದಿಗರಾಗಿ ಜೀವನವನ್ನೂ ಸಾಗಿಸಿದ್ದಾರೆ. ಬಾಂಬೆಯ ಗಣೇಶಪುರಿಯಲ್ಲಿರುವ ನಿತ್ಯಾನಂದವಧೂತರ ತತ್ವಗಳಿಗೆ ಆಕರ್ಷಿತರಾಗಿ ಅವರನ್ನು ಕಾಣುವ ಹಂಬಲ ಅಂತರಂಗದಲ್ಲಿ ಹಂಬಲಿಸುತ್ತಿರುತ್ತದೆ. ಮಾವನವರು ನೀಡಿದ ಜಮೀನಿನಲ್ಲಿ ಒಂದು ನೆಲಮಾಳಿಗೆಯನ್ನು ಮಾಡಿಕೊಂಡು ಧ್ಯಾನ, ಹಟಯೋಗ ಮತ್ತು ಪ್ರಾಣಾಯಾಮ ಮೊದಲಾದವುಗಳಲ್ಲಿ ಅಭ್ಯಾಸನಿರತರಾಗಿದ್ದಾರೆ. ಮನದಾಸೆಯಂತೆ ಸುಮಾರು ಎರಡು ವರ್ಷಗಳ ಕಾಲ ಬಾಂಬೆಗೆ ಹೋಗಿ ನಿತ್ಯಾನಂದರ ಆಶ್ರಮದಲ್ಲಿದ್ದು ಬಂದಿದ್ದಾರೆ. ಅಲ್ಲಿಂದ ಮೈಸೂರಿಗೆ ತೆರಳಿ ಅರಸು ಮನೆತನಕ್ಕೆ ಪರಿಚಿತರಾಗಿ ಔಷಧೋಪಚಾರ ನೀಡಿದ್ದಾರೆ. ಅಲ್ಲಿದ್ದಾಗಲೆ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ನಿತ್ಯಾನಂದರ ಹೆಸರಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದ್ದಾರೆ. ಹಿರಿಯೂರು ತಾಲೂಕಿನ ಕಸ್ತೂರಿ ರಂಗಪ್ಪನ ಹಳ್ಳಿಯ ಹತ್ತಿರದ ಹೆದ್ದಾರಿ ಪಕ್ಕದ ಮಾವನವರು ನೀಡಿದ ಜಮೀನಿನಲ್ಲೂ ಆಶ್ರಮವನ್ನು ಸ್ಥಾಪಿಸಿದ್ದಾರೆ. 1987ರಲ್ಲಿ ಸಮಾಧಿಸ್ಥರಾದ ಕರೀಂಪೀರರು ಸ್ವರಾಜ್ ಫಾರ್ಮಸಿ ಎನ್ನುವ ಔಷಧ ಅಂಗಡಿಯನ್ನು ಸ್ಥಾಪಿಸಿದ್ದರೆಂದು ಅವರ ಶಿಷ್ಯರಾದ ಹಿರಿಯೂರಿನ ಗೋವಿಂದಪ್ಪನವರು ಹೇಳುತ್ತಾರೆ. ರಾಜಯೋಗ ದಿವ್ಯವಾಣಿ, ರಾಜಯೋಗ ಸಾರತತ್ವ ಎನ್ನುವ ಯೋಗ ರಹಸ್ಯದ ಕೃತಿಗಳನ್ನು ರಚಿಸಿದ್ದಾರೆ. ಅವರ ತತ್ವ ಚಿಂತನೆಗೆ ಒಳಗಾದ ಶಿಷ್ಯರು ನಾಡಿನಾದ್ಯಂತ ಇದ್ದಾರೆ. ಗೋವಿಂದಪ್ಪನವರು ಕರೀಂಪೀರ ಚಂದ್ರ ಎನ್ನುವ ಅಂಕಿತದಿಂದ ತತ್ವಪದಗಳನ್ನು ರಚಿಸಿದ್ದಾರೆ. ಶಿರಾ ಚಿತ್ರದುರ್ಗ, ಹೊಸದುರ್ಗ, ಹಿರಿಯೂರು ಭಾಗಗಳಲ್ಲಿ ಹಲವಾರು ಜನ ಶಿಷ್ಯಮಕ್ಕಳು ಕರೀಂಪೀರರ ತತ್ವಗಳನ್ನು ಅನುಸರಿಸುತ್ತಿದ್ದಾರೆ.
ಬಹುತ್ವದ ನೆಲಯಾಗಿರುವ ಚಿತ್ರದುರ್ಗ ಪರಿಸರದಲ್ಲಿ ಗುಡಿಕಲ್ ಪರಂಪರೆ, ಅವಧೂತ ಪರಂಪರೆ, ಶಾಕ್ತಪರಂಪರೆ, ಸಿದ್ಧ ಪರಂಪರೆ ಮೊದಲಾದ ಧಾರೆಗಳಿರುವಂತೆ ಅಚಲ ಪರಂಪರೆಯೂ ಇತ್ತೆನ್ನುವುದಕ್ಕೆ ಕರೀಂಪೀರರು ತತ್ವವೊಂದನ್ನು ರಚಿಸಿದ್ದಾರೆ.

ಅಚಲಮಾರ್ಗದಿ ನೀನು ವಿಚಲಿತನಾಗದೆ ।
ರಚನೆ ಹೇಳುವೆ ಕೇಳಲೆ ಮನವೇ॥ಪ ।
ನೀಚರಿಗರುಹುವ ಸೂಚನೆ ಎಲ್ಲಾ ಬಿಟ್ಟು ।
ವಿಚಾರ ಕೇಳೂತ । ಆಚಾರ್ಯ ಮುಖದಿ ।
ಖೇಚರಿ ಮುದ್ರೆ ಹಿಡಿ ಎಲೆ ಮನವೇ
ಯೋಚಿಸಿ ನಡೆಯುವುದೇ ಅಚಲ ॥ಅ.ಪ॥
ಪಾತಕ ಕಳೆದು ಆತ್ಮನು ತಿಳಿಸುವ ।
ತಾತ ಕರೀಂಪೀರಾನ ನೆನೆ ಮನವೇ ॥
ಸತತದಿ ಅಚಲ । ಮೂರ್ತಿಯ ಧ್ಯಾನಿಸಿ ।
ಖ್ಯಾತಿ ಮುಕ್ತಿಯಪಡೇ ಎಲೆ ಮನವೇ॥ ಅಚಲಮಾರ್ಗ॥॥

ಕೋಲಾರ, ತುಮಕೂರು ಭಾಗಗಳಲ್ಲಿ ವ್ಯಾಪಕವಾಗಿ ಹರಡಿರುವ ಅಚಲ ಪರಂಪರೆ ಬೌದ್ಧ ಮಧ್ಯಮ ಮಾರ್ಗದ ಹನ್ನೆರಡು ಹಂತದ ಸಾಧನಾ ಮಾರ್ಗದಲ್ಲಿ ಎಂಟನೆಯ ಹಂತ ಇದಾಗಿದೆ ಎಂದು ಹೇಳಲಾಗಿದೆ.
ತತ್ವಪದಗಳ ವಸ್ತು ಆಧ್ಯಾತ್ಮವೇ ಆಗಿದೆ. ವ್ಯಕ್ತಿಯ ಆತ್ಮೋದ್ಧಾರದ ಅನುಭವಗಳೇ ಅನುಭಾವದ ಹಾಡಾಗಿವೆ. ಜೀವನದ ಅನಿತ್ಯತೆ, ಮುಕ್ತಿಯ ಹಂಬಲ, ಮೌಢ್ಯಗಳ ವಿರೋಧ, ಡಂಭಾಚಾರಗಳ ಖಂಡನೆ, ಸಾಮಾಜಿಕ ಕಳಕಳಿ ಮತ್ತು ಸಾಮಾಜಿಕ ಸಾಮರಸ್ಯ, ಸಾಮಾಜಿಕ ಪ್ರಜ್ಞೆ ಮುಂತಾದ ವಿಷಯಗಳ ಅಭಿವ್ಯಕ್ತಿ ತತ್ವಗಳ ಆಶಯವಾಗಿದೆ. ಮೇಲ್ನೋಟಕ್ಕೆ ಸಂಸಾರದ ವಿಮುಖ ನೆಲೆಗಳಂತೆ ಕಂಡು ಬಂದರೂ ಅನುಭಾವಿಗಳಲ್ಲಿ ಹೆಚ್ಚಿನವರು ಸಂಸಾರದಲ್ಲಿದ್ದೆ ಪಾರಮಾರ್ಥದ ಸಾಧನೆ ಮಾಡಿದವರಾಗಿದ್ದಾರೆ. ಈ ಭಾಗದಲ್ಲಿ ತುಂಬಾ ಜನಪ್ರಿಯವಾಗಿರುವ, ತತ್ವಪದ ಹಾಡುಗಾರರ ಮೂಲಕ ತಮ್ಮ ಅಸ್ತಿತ್ವವನ್ನು ಗಟ್ಟಿ ಮಾಡಿಕೊಂಡಿರುವ ಕೆಲ ಸಂಪ್ರದಾಯಗಳಿವೆ. ಅದರಲ್ಲಿ ತುಂಬಾ ವ್ಯಾಪಕತೆಯನ್ನು ಪಡೆದಿರೋದು ನರಹರಿ ಸಂಪ್ರದಾಯ.
ನರಹರಿ ಸಂಪ್ರದಾಯದ ಆಶ್ರಮಗಳು ಕರ್ನಾಟಕ ಮತ್ತು ನೆರೆಯ ಆಂಧ್ರಪ್ರದೇಶದಲ್ಲೂ ಇವೆ. ತುರುವನೂರಿನ ಲಿಂಗಾರ್ಯರು ಇದೇ ಪರಂಪರೆಯವರಾಗಿದ್ದು ನರಹರಿ ಹೆಸರಿನ ಅಂಕಿತದಲ್ಲಿ ಹಲವಾರು ತತ್ವಗಳನ್ನು ಆಧ್ಯಾತ್ಮದ ಕೃತಿಗಳನ್ನು ರಚಿಸಿದ್ದಾರೆ. ಭಕ್ತಿ, ಯೋಗ, ಸಾಂಖ್ಯ ತಾರಕ, ಮತ್ತು ಅಮನಸ್ಕಗಳ ಸಾಧನಾ ಮಾರ್ಗಗಳ ನಡೆಗೆ ಒತ್ತು ನೀಡಿದ ತತ್ವಗಳಿವೆ. ಜೊತೆಗೆ ಬದುಕಿನ ನಿಜ ಮೌಲ್ಯಗಳನ್ನು ಹೇಳುವ ಮೂಲಕ ಹಸನಾದ ಬದುಕಿನ ದಾರಿ ತೋರಿಸಿದ್ದಾರೆ.ಗುರುಭಕ್ತಿ ಸದಾಚಾರ, ನೈತಿಕತೆ ಜಾತ್ಯತೀತತೆ, ಸೌಹಾರ್ದತೆ ಸಾಮರಸ್ಯದ ವಿಚಾರಗಳನ್ನು ಕುರಿತು ಹಲವು ತತ್ವಗಳಲ್ಲಿ ವಿವೇಚಿಸಿದ್ದಾರೆ.

ಅಜ್ಞಾತವಾಗಿ ಆಧ್ಯಾತ್ಮದ ಮಾರ್ಗ ಅನುಸರಿಸಿದ, ಆ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನವಿಕ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಯನ್ನು ತಂದ ಮಹಾತ್ಮರುಗಳ ಜೊತೆ ಹಲವಾರು ಸಾಧಕರಿದ್ದಾರೆ. ಜಾತಿ ಮತ ಧರ್ಮಗಳ ಎಲ್ಲೆಯನ್ನು ಮೀರಿದ ಇಲ್ಲಿನ ಸಿದ್ಧ, ಆರೂಢ, ಅವಧೂತ, ನಾಥ ಸೂಫಿ ಸಂಪ್ರದಾಯದ ಸಾಧಕರಿದ್ದಾರೆ. ಅಂಥವರ ಗುರುಶಿಷ್ಯ ಪರಂಪರೆ ಈಗಲೂ ಮುಂದುವರೆದಿದೆ. ಕೊಳಾಳು ಕೆಂಚಾವಧೂತರ ಸಂಪ್ರದಾಯ, ಕಳವೀಬಾಗಿ ರಂಗಾವಧೂತರ ಸಂಪ್ರದಾಯ, ನರಹರಿ ಸಂಪ್ರದಾಯ. ಬಂಬಂಸ್ವಾಮಿಗಳ ಸಂಪ್ರದಾಯ, ಸಿದ್ಧಾರೂಢರ ಸಂಪ್ರದಾಯ, ಶಾಂತಾವಧೂತರ ಸಂಪ್ರದಾಯ, ನಾಯಕನಹಟ್ಟಿ ತಿಪ್ಪೇಸ್ವಾಮಿ ಸಂಪ್ರದಾಯ, ಗುಡಿಕಲ್ ಸಂಪ್ರದಾಯ, ರಾಯದುರ್ಗದ ಸಕ್ರಪ್ಪಸ್ವಾಮಿಗಳ ಸಂಪ್ರದಾಯ ಹೀಗೆ ಸಿದ್ಧ ಅವಧೂತ, ಆರೂಢ ಮಾರ್ಗದ ಗುರು ಪರಂಪರೆ ಹಬ್ಬ ಹುಣ್ಣಿಮೆಗಳಲ್ಲಿ ಒಂದೆಡೆ ಸೇರಿ ತತ್ವಪದಗಳೊಂದಿಗೆ ಸಂವಾದ ನಡೆಸುತ್ತಿರುತ್ತಾರೆ.

**ನಾಯಕನಹಟ್ಟಿತಿಪ್ಪೇಸ್ವಾಮಿ ಸಂಪ್ರದಾಯ**: ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ನಮ್ಮ ಸೀಮೆಯ ಬಹುದೊಡ್ಡ ಅವಧೂತ ಕ್ಷೇತ್ರ. ಹುಬ್ಬಳ್ಳಿಯ ಸಿದ್ಧಾರೂಢರಂತೆ, ತಿಪ್ಪೇಸ್ವಾಮಿ ಎಲ್ಲ ಸಮೂಹಗಳ ಗುರುವಾಗಿ ಸ್ವೀಕರಿಸಲ್ಪಟ್ಟವರು. ಅವರ ಗದ್ದುಗೆಯು ಸೂಫಿ ಸಂಪ್ರದಾಯವನ್ನೂ ನೆನಪಿಸುವಂತಿದ್ದು, ಹೈದರಾಲಿ ಮತ್ತು ಟಿಪ್ಪು ಕೂಡ ತಿಪ್ಪೇಸ್ವಾಮಿಯವರನ್ನು ಗುರುವೆಂದು ಗೌರವಿಸಿದ್ದಾರೆ. ತಿಪ್ಪೇಸ್ವಾಮಿಯವರ ಶಿಷ್ಯ ಪರಂಪರೆ ಅನೇಕ ಕವಲುಗಳಾಗಿ ಬೆಳೆದಿದೆ. ತಿಪ್ಪೇಶ, ತಿಪ್ಪಯ್ಯ, ತಿಪ್ಪೇರುದ್ರ, ತಿಪ್ಪೇಸ್ವಾಮಿ ಎನ್ನುವ ಅಂಕಿತಿರುವ ಹಲವಾರು ತತ್ವಪದಗಳಿವೆ. ಆದರೆ ಕೆಲವು ತತ್ವಗಳನ್ನು ರಚಿಸಿದವರ ಮಾಹಿತಿಯಿಲ್ಲ. ಅನುಭಾವಿಗಳ ಹಾಗು ಭಜನೆ ಕಲಾವಿದರು ಹಾಡುತ್ತಿರುತ್ತಾರೆ. ಸಿದ್ಧ, ಸಂತ, ಅವಧೂತ, ಯೋಗಿ ಹೀಗೆ ಕರೆಸಿಕೊಳ್ಳುವ ತಿಪ್ಪೇಸ್ವಾಮಿಯ ಭಕ್ತರು ಅಪಾರ ಸಂಖ್ಯೆಯಲ್ಲಿದ್ದಾರೆ. ಮಧ್ಯಕರ್ನಾಟಕದ ಸಾಂಸ್ಕೃತಿಕ ನಾಯಕನಂತೆ ಜಾತಿ, ಮತ, ಧರ್ಮ, ವರ್ಗ, ವರ್ಣಗಳನ್ನು ಮೀರಿ ಕರ್ನಾಟಕವಲ್ಲದೆ ನೆರೆಯ ಆಂಧ್ರ ಮತ್ತು ಮಹಾರಾಷ್ಟ್ರದಲ್ಲೂ ಭಕ್ತರಿದ್ದಾರೆ. ಶಿಷ್ಟ ಮತ್ತು ಪರಿಶಿಷ್ಟ ಸಂಸ್ಕೃತಿಗಳ ಸಂಗಮದಂತೆ ಎಲ್ಲಾ ಸಮುದಾಯವೂ ಇಲ್ಲಿ ಸೇರುತ್ತಾರೆ. ಆತನ ಬದುಕು ಮತ್ತು ಸಾಧನೆ ಕುರಿತಂತೆ ಅನೇಕ ತತ್ವಪದಗಳು ರಚನೆಯಾಗಿವೆ. ಕೆರೆಕಟ್ಟೆಗಳನ್ನು ನಿರ್ಮಿಸುವಾಗ ಮಾಡಿದವರಿಗೆ ನೀಡುಭಿಕ್ಷೆ ಎನ್ನುವ ಕಾಯಕನಿಷ್ಠೆಯ ಮಾತು ಶ್ರಮಸಂಸ್ಕೃತಿಯ ಪ್ರತೀಕವಾಗಿ ಜನಪ್ರಿಯವಾಗಿದೆ.

**ಕೊಳಹಾಳು ಕೆಂಚಾವಧೂತರಸಂಪ್ರದಾಯ**: ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಮತ್ತು ಹೊಳಲ್ಕೆರೆ ತಾಲ್ಲೂಕಿನ ಗಡಿ ಭಾಗದ ಕೊಳಹಾಳಿನಲ್ಲಿದ್ದ ಕೆಂಚಾವಧೂತರು ಅವಧೂತ ಪರಂಪರೆಯವರು. ಪ್ರಧಾನವಾಗಿ ಚಿದಾನಂದವಧೂತರ ಶಾಕ್ತ ಪರಂಪರೆಯನ್ನು ಮುಂದುವರೆಸಿದವರು. ಲೌಕಿಕವಾಗಿ ಬಾಳಿ ಬದುಕಿನಲಿ ್ಲಅನುಭಾವ ಮಾರ್ಗದ ಆಧ್ಯಾತ್ಮಿಕ ಸಾಧನೆ ಮಾಡಿದವರು. ಇವರ ಶಿಷ್ಯ ಪರಂಪರೆಗೆ ಸೇರಿದ ಅನೇಕ ಸಾಧಕರಿಂದ ಕೆಂಚೇಶ, ಕೆಂಚಪ್ಪ, ಕೆಂಚಾವಧೂತ ಮೊದಲಾದ ಅಂಕಿತವಿರುವ ಅನೇಕ ತತ್ವಪದಗಳು, ಸ್ತುತಿಪದಗಳು ಮಂಗಳಾರತಿ ಪದಗಳು ರಚನೆಯಾಗಿವೆ.

**ಕಳವೀಬಾಗಿ ರಂಗಾವಧೂತರ ಸಂಪ್ರದಾಯ**; ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕಳವೀಬಾಗಿಯ ರಂಗಾವಧೂತರು ಪರಶುರಾಮಪುರದ ರಾಜಯೋಗಿ ತಿಪ್ಪೇಸ್ವಾಮಿಯ ಶಿಷ್ಯರು. ಸಾಮಾಜಿಕ ಸಾಮರಸ್ಯದ ಸಂಕೇತದಂತೆ ಗುರುಗಳಾದ ರಾಜಯೋಗಿ ತಿಪ್ಪೇಸ್ವಾಮಿಯ ಸಮಾಧಿ ಪಕ್ಕದಲ್ಲಿಯೆ ಇಬ್ಬರು ಶಿಷ್ಯರಾದ ರಂಗಾವಧೂತರ ಮತ್ತು ಕರೀಂಪೀರರ ಸಮಾಧಿಗಳು ಒಂದೇ ಆವರಣದಲ್ಲಿವೆ. ಯೋಗ ಧ್ಯಾನ ಸತ್ಸಂಗ ಮೊದಲಾದ ಆಧ್ಯಾತ್ಮಿಕ ವಿಚಾರಗಳನ್ನು ಅನುಸರಿಸುತ್ತಿರುವವರಲ್ಲಿ ಅನೇಕರು ಕಳವೀಭಾಗಿ ಮಾರ್ಗಾವಲಂಭಿಯಾಗಿದ್ದಾರೆ.

**ಕಂದಿಕೆರೆಶಾಂತಾವಧೂತರ ಸಂಪ್ರದಾಯ**: ಶಿರಾ ತಾಲೂಕಿನ ರಾಮಲಿಂಗಾಪುರದವರು. ಬಾಲ್ಯದಿಂದಲೇ ವೈರಾಗ್ಯ ಬದುಕಿಗೆ ಆಕರ್ಷಿತರಾಗಿ ಊರೂರು ಅಲೆದಾಡಿದ್ದಾರೆ. ಮುಸ್ಟೂರಿನ ಹುಚ್ಚುನಾಗಲಿಂಗಸ್ವಾಮಿಗಳಿಂದ ಗುರುದೀಕ್ಷೆ ಪಡೆದುಕೊಂಡಿದ್ದಾರೆ. ಜಗಳೂರಿನ ಕಣಕುಪ್ಪೆ ಮಠದಲ್ಲಿದ್ದ ಇವರು ಹಠಯೋಗ ಸಾಧಕರೆಂದು ಹೆಸರು ಪಡೆದಿದ್ದವರು. ತುಮಕೂರು, ಚಿತ್ರದುರ್ಗ, ದಾವಣಗೆರೆಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಇವರ ಜ್ಞಾಪಕ ಸಮಾಧಿಗಳಿವೆ. ಚಿತ್ರದುರ್ಗ ಜಿಲ್ಲೆಯಲ್ಲೆ ಸುಮಾರು 30 ಕ್ಕೂ ಹೆಚು ಜ್ಞಾಪಕ ಸಮಾಧಿಗಳಿವೆ. ಹುಳಿಯಾರು ಸಮೀಪದ ಕಂದಿಕೆರೆಯಲ್ಲಿ ನಿಜಸಮಾಧಿಯ ಗದ್ದುಗೆ ಇದೆ. ಅಲ್ಲಿಗೆ ನಿತ್ಯವೂ ನೂರಾರು ಭಕ್ತರು ತಮ್ಮ ಸಮಸ್ಯೆಗಳೊಂದಿಗೆ ಆಗಮಿಸುತ್ತಾರೆ

**ವದ್ದೀಕೆರೆ ಸಿದ್ಧಪ್ಪನ ಸಂಪ್ರದಾಯ:** ಹಿರಿಯೂರು ತಾಲ್ಲೂಕಿನ ವದ್ದೀಕೆರೆ ಅತ್ಯಂತ ಪ್ರಾಚೀನ ಸಿದ್ಧ ಮತ್ತು ನಾಥ ಪರಂಪರೆಗೆ ಸೇರಿದ ಕ್ಷೇತ್ರ. ಸಿದ್ಧೇಶ, ಸಿದ್ಧಪ್ಪ, ವದ್ದೀಕೆರೆ ಸಿದ್ಧ ಎಂಬ ಅಂಕಿತವಿರುವ ಭಕ್ತಿಗೀತೆಗಳು, ಗುರುಸ್ತುತಿಗಳು, ತತ್ವಪದಗಳು ರಚನೆಯಾಗಿವೆ. ಕೆಲ ತತ್ವಗಳನ್ನು ರಚಿಸಿದವರ ಬಗ್ಗೆ ಸರಿಯಾದ ಮಾಹಿತಿಯಿಲ್ಲ. ಐತಿಹಾಸಿಕ ಮಹತ್ವವುಳ್ಳ ಹೇಮಾವತಿಯ (ಆಂಧ್ರಪ್ರದೇಶದ ಮಡಕಶಿರಾ ತಾಲೂಕು) ಸಿದ್ಧಪುರುಷ ಸಿದ್ಧಪ್ಪನು ವದ್ದೀಕೆರೆಯ ವಾಯುವ್ಯ ದಿಕ್ಕಿನಲ್ಲಿದ್ದ ನೊಣವಿ ಪಟ್ಟಣದ ಅರಸನು ವಚನ ಭ್ರಷ್ಟನಾಗಿದ್ದರಿಂದ ಅವನನ್ನು ಶಿಕ್ಷಿಸಲು ಬಂದು ಇಲ್ಲಿಯೆ ಹುತ್ತದಲ್ಲಿ ನೆಲೆಸಿದನೆಂಬ ಐತಿಹ್ಯವಿದೆ. ಈ ಪ್ರದೇಶವನ್ನು ಕಾಲಭೈರವನ ನೆಲೆಯೆಂದೂ ಗುರ್ತಿಸಲಾಗಿದೆ. ಜಾತಿಮತಗಳ ತಾರತಮ್ಯವಿಲ್ಲದೆ ಅಪಾರ ಭಕ್ತರನ್ನುಸಿದ್ದಪ್ಪನಸಂಪ್ರದಾಯವರುಮುಂದುವರೆಸಿದ್ದಾರೆ.

**ತತ್ವಪದಕಾರ ಹೊನ್ನೇನಹಳ್ಳಿದಾಸ ಗಿರಿಯಪ್ಪ.(1901–2003):** ತಾನೆ ರಚಿಸಿದ ತತ್ವಪದಗಳನ್ನ ಹಾಡುತ್ತಾ, ಮಣ್ಣಿನಿಂದ ಗೊಂಬೆಗಳನ್ನ ಮಾಡುತ್ತಿದ್ದ ಕಾಯಕಜೀವಿ ದಾಸಗಿರಿಯಪ್ಪನವರು ಹೊಸದುರ್ಗತಾಲೂಕಿನ ಹೊನ್ನೇನಹಳ್ಳಿಯ ನಾಯಕ ಸಮುದಾಯದವರು. ಗೊಂಬೆಗಳನ್ನು ಮಾಡುವುದರ ಜೊತೆಗೆ ಚಿತ್ರಗಳನ್ನು ಬಿಡಿಸುವುದರಲ್ಲಿಯೂ ನಿಪುಣರು. ಇಂಥವಿಶಿಷ್ಟ ಕಲೆಗಳನ್ನು ಕರಗತ ಮಾಡಿಕೊಂಡಿದ್ದ ಗಿರಿಯಪ್ಪ, ದಾಸಯ್ಯನ ಮುದ್ರೆ ಹಾಕಿಸಿಕೊಂಡಿದ್ದರಿಂದ ದಾಸಗಿರಿಯಪ್ಪನೆಂಬ ಹೆಸರು ರೂಢಿಗೆ ಬಂದಿದೆ. ಸಂಸಾರವಂದಿಗರಾಗಿದ್ದ ಇವರು ಜೀವನ ನಿರ್ವಹಣೆಗೆ ಆಯ್ಕೆ ಮಾಡಿಕೊಂಡಿದ್ದು ಗೊಂಬೆ ಮಾಡುವ ಕಾಯಕವನ್ನು. ಗಣಪತಿ, ಬಸವಣ್ಣ, ನವಿಲು, ಜಿಂಕೆ, ಟಗರು, ಮೊದಲಾದ ಗೊಂಬೆಗಳನ್ನು ಮಣ್ಣಿನಿಂದ ಆಕರ್ಷಕವಾಗಿ ಮಾಡುತ್ತಿದ್ದು ನೋಡುಗರಿಗೆ ಆಧ್ಯಾತ್ಮದ ಅನುಭಾವ ಮೂಡುವ ಹಾಗಿರುತ್ತಿದ್ದವೆಂದು ಅವರ ಅನುಯಾಯಿಗಳು ನೆನೆಯುತ್ತಾರೆ

**ಅಪರೋಕ್ಷಾನುಭವಿ ಸಕ್ರಪ್ಪ ತಾತ:** ನೇಕಾರ (ಪದ್ಮಸಾಲಿ) ಸಮುದಾಯದ ವೆಂಕಟಸ್ವಾಮಿ(ರಾಯದುರ್ಗ) ಮತ್ತು

ಅಚ್ಚಮಾಂಬೆ(ತುರುವನೂರು) ದಂಪತಿಗಳ ಮಗನಾದ ಸಕ್ರಪ್ಪನವರು ಆರೂಢ ಪರಂಪರೆಯ ಸಿದ್ಧಾರೂಢರ ಮಠದಲ್ಲಿ ಸುಮಾರು 12 ವರ್ಷ ಸಾಧನೆಯ ಮಾರ್ಗದಲ್ಲಿ ಬೆಳೆದವರು. ಅಲ್ಲಿನ ಬಸವಂತಾರ್ಯರ ಶಿಷ್ಯರಾಗಿ ಅವರಿಂದ ದೀಕ್ಷೆ ಪಡೆದವರು. ಸಂಸಾರ ವಂದಿಗರಾಗಿದ್ದರೂ, ಆಧ್ಯಾತ್ಮ ಮತ್ತು ಅನುಭಾವ ಮಾರ್ಗದ ಬಗ್ಗೆ ಅಪಾರ ಆಸಕ್ತಿಯುಳ್ಳವರು. ಆಧ್ಯಾತ್ಮ ಮತ್ತು ಅನುಭಾವದ ತತ್ವಗಳನ್ನು ಪ್ರಚಾರ ಮಾಡುವ ಸಲುವಾಗಿಯೆ ಸುಖಾಶ್ರಯ ಪ್ರಬೋಧ ಎನ್ನುವ ಮಾಸಪತ್ರಿಕೆಯನ್ನು ಪ್ರಕಟಿಸಿದ್ದಾರೆ

**References**


1. ಶಾಂತರಸ (ಸಂ) ತತ್ವಪದಗಳು(ಪ್ರಾತಿನಿಧಿಕ ಸಂಕಲನ.) ಕರ್ನಾಟಕ ಸಾಹಿತ್ಯ ಅಕಾಡೆಮಿ.ಬೆಂಗಳೂರು.
2. ಕಾಳೇಗೌಡ ನಾಗವಾರ ಮತ್ತು ಆನಂದಮೂರ್ತಿ(ಸಂ) ಹಲವು ತೋಟದ ಹೂಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,ಬೆಂಗಳೂರು
3. ರಹಮತ್ ತರೀಕೆರೆ ಮತ್ತು ಅರುಣ್ ಜೋಳದ ಕೂಡ್ಲಿಗಿ. (ಸಂ) ತತ್ವಪದ ಪ್ರವೇಶಿಕೆ. ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ. ಬೆಂಗಳೂರು.
4. ಕರಿಯಪ್ಪಮಾಳಿಗೆ.(ಸಂ)ಹೊನ್ನೇನಹಳ್ಳಿದಾಸಗಿರಿಯಪ್ಪ, 'ಕ್ರಪ್ಪತಾತ ಇತರರ ತತ್ವಪದಗಳು. ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ. ಬೆಂಗಳೂರು.
5. ಅಮರೇಶ ನುಗಡೋಣಿ .ತತ್ವಪದ ಸಾಹಿತ್ಯ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ
6. ಡಾ.ಜೆ.ಕರಿಯಪ್ಪ ಮಾಳಿಗೆ.ಬಯಲುಸೀಮೆ ಅವಧೂತರು. ಸಿ.ವಿ.ಜಿ.ಪ್ರಕಾಶನ.ಬೆಂಗಳೂರು